**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಹಗರಿಬೊಮ್ಮನಹಳ್ಳಿ.**

**ಸಿ.ಸಿ.ಸಂಖ್ಯೆ: 76/2020**

ಪಿರ್ಯಾದುದಾರಾರು : ರಾಜ್ಯದ ಪರವಾಗಿ ಇಟ್ಟಿಗಿ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು :
1) ನಾಮದೇವನಾಯ್ಕ.ಎನ್. ಬಿನ್ ನಾಗರಾಜನಾಯ್ಕ,
ವಯಸುಃ30 ವರ್ಷ, ಉದ್ಯೋಗಃ ವ್ಯವಸಾಯ,

2) ನಾಗರಾಜ ನಾಯ್ಕ ಬಿನ್ ಹಾಲ್ಯಾನಾಯ್ಕ,
ವಯಸುಃ 60 ವರ್ಷ, ಉದ್ಯೋಗಃ ವ್ಯವಸಾಯ,

3) ಮೋತಿ ಬಾಯಿ ಕೊಂ. ನಾಗರಾಜನಾಯ್ಕ,
ವಯಸುಃ 55 ವರ್ಷ, ಉದ್ಯೋಗಃ ಗೃಹಿಣಿ,

4) ಉಮಾಪತಿ ಬಿನ್ ನಾಗರಾಜ ನಾಯ್ಕ,
ವಯಸುಃ 25 ವರ್ಷ, ಉದ್ಯೋಗಃ ವ್ಯವಸಾಯ,
ಎಲ್ಲಾರೂ ವಾಸಃ ಕೋಗಳಿ ತಾಂಡ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.

**ದೋಷಾರೋಪಣೆ**

ಶ್ರೀಮತಿ ಭಾಗ್ಯಲಕ್ಷ್ಮಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಅದ ನಾನು 1 ರಿಂದ 4 ನೇ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೇಃ

ದಿನಾಂಕಃ10-05-2015 ರಂದು ಇಟ್ಟಿಗಿ ಪೊಲೀಸ್ ಠಾಣಾ ಸರಹದ್ದಿನ ಗೋವಿಂದಾಪುರ ತಾಂಡ-2 ಗ್ರಾಮದ ವಾಸಿಯಾದ ಚಾಸಾ-1 ರವರನ್ನು 1 ನೇ ಆರೋಪಿಯಾದ ನೀವು ಮದುವೆ ಮಾಡಿಕೊಂಡಿದ್ದು, ನಂತರ ಎರಡು ವರ್ಷಗಳ ಕಾಲ ಚಾಸಾ-1 ರವರು ಚೆನ್ನಾಗಿ ಸಂಸಾರ ನಡೆಸಿಕೊಂಡು ಹೋಗಿದ್ದು, ನಂತರ ಈಗೆ ಎರಡು ವರ್ಷಗಳ ಹಿಂದೆ 1 ರಿಂದ 4 ನೇ ಆರೋಪಿತರಾದ ನೀವು ಹೆಚ್ಚಿನ ವರದಕ್ಷಿಣೆ ಹಣ ತರುವಂತೆ ಚಾಸಾ-1 ರವರಿಗೆ ಮಾನಸಿಕವಾಗಿ

ಮತ್ತು ದೈಹಿಕ ಕಿರುಕುಳ ನೀಡಿದ್ದು, ಆದ್ದರಿಂದ 1 ರಿಂದ 4 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.498(ಎ) ಹಾಗೂ ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಸ್ವ-ಇಚ್ಛೆಯಿಂದ ಚಾಸಾ-1 ರವರ ಜೊತೆ ಜಗಳ ತೆಗೆದು ನಿನ್ನನ್ನು ಚೆನ್ನಾಗಿ ನೋಡಿಕೊಳ್ಳಬೇಕಾದರೆ, ಈಗ ನೀನು ನಿನ್ನ ತವರು ಮನೆಗೆ ಹೋಗಿ ಹೆಚ್ಚಿನ ವರದಕ್ಷಿಣೆಯಾಗಿ ರೂ.50,000/- ಹಣ, 2 ತೊಲೆ ಬಂಗಾರವನ್ನು ತೆಗೆದುಕೊಂಡು ಬಾ ಎಂದು ಬೈದು ಗಲಾಟೆ ಮಾಡಿ ಹೊಡಿ-ಬಡಿ ಮಾಡಿದ್ದು, ಆದ್ದರಿಂದ 1 ರಿಂದ 4 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.323 ಹಾಗೂ ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೂರನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವು ಏಕೋದ್ದೇಶ ಹೊಂದಿ ಸ್ವ-ಇಚ್ಛೆಯಿಂದ ಚಾಸಾ-1 ರವರಿಗೆ ನಿನ್ನನ್ನು ಚೆನ್ನಾಗಿ ನೋಡಿಕೊಳ್ಳಬೇಕಾದರೆ, ಈಗ ನೀನು ನಿನ್ನ ತವರು ಮನೆಗೆ ಹೋಗಿ ಹೆಚ್ಚಿನ ವರದಕ್ಷಿಣೆಯಾಗಿ ರೂ.50,000/- ಹಣ, 2 ತೊಲೆ ಬಂಗಾರವನ್ನು ತೆಗೆದುಕೊಂಡು ಬಾ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ಧಗಳಿಂದ ಬೈದು ಉದ್ದೇಶಪೂರ್ವಕವಾಗಿ ಚಾಸಾ-1 ರವರಿಗೆ ಅವಮಾನ ಮಾಡಿ ಶಾಂತಿಭಂಗವುಂಟು ಮಾಡಿದ್ದರಿಂದ 1 ರಿಂದ 4 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ನಾಲ್ಕನೆಯದಾಗಿ ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ನಿಮ್ಮ ಮದುವೆಯ ಸಮಯದಲ್ಲಿ ವರದಕ್ಷಿಣೆಯಾಗಿ ರೂ.2,00,000/- ನಗದು ಹಣ ಹಾಗೂ 4 ತೊಲೆಯ ಬಂಗಾರದ ಚೈನ್, 1 ತೊಲೆಯ ಬಂಗಾರದ ಉಂಗುರ ಒಟ್ಟು 5 ತೊಲೆ ಬಂಗಾರದ ಆಭರಣಗಳನ್ನು ಮತ್ತು 3 ನೇ ಆರೋಪಿಯಾದ ನಿಮಗೆ 30 ತೊಲೆ ಬೆಳ್ಳಿಯ ಕಾಲ್ಗಡವನ್ನು ವರದಕ್ಷಿಣೆಯಾಗಿ ಕೊಟ್ಟು ಚಾಸಾ-1 ರವರ ಜೊತೆ ಮದುವೆ ಮಾಡಿದ್ದು, ನಂತರ 1 ರಿಂದ 5 ನೇ

ಆರೋಪಿತರಾದ ನೀವು ಇನ್ನೂ ಹೆಚ್ಚಿನ ವರದಕ್ಷಿಣೆಯಾಗಿ ರೂ.50,000/- ಹಣ ಹಾಗೂ 2 ತೊಲೆ ಬಂಗಾರವನ್ನು ತರಬೇಕು ಅಂತಾ ಚಾಸಾ-1 ರವರ ಜೊತೆ ಗಲಾಟೆ ಮಾಡಿ ಅವರನ್ನು ಮನೆಯಿಂದ ಹೊರಗಡೆ ದಬ್ಬಿದ್ದು, ಆದ್ದರಿಂದ 1 ರಿಂದ 4 ನೇ ಆರೋಪಿತರಾದ ನೀವು ಡಿ.ಪಿ.ಆಕ್ಟ್. 3 ಮತ್ತು 4 ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

1 ರಿಂದ 4 ನೇ ಆರೋಪಿತರಾದ ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. 1 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 1 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 2 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 2 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 3 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 3 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

1. 4 ನೇ ಆರೋಪಿಯಾದ ನಿಮಗೆ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?

ಉತ್ತರಃ

2. 4 ನೇ ಆರೋಪಿಯಾದ ನೀವು ನಿಮ್ಮ ಸದರಿ ತಪ್ಪುಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

ಸ್ಥಳಃ ಹಗರಿಬೊಮ್ಮನಹಳ್ಳಿ
ದಿನಾಂಕಃ **18-02-2022**

ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.,
ಹಗರಿಬೊಮ್ಮನಹಳ್ಳಿ

**1** ನೇ ಆರೋಪಿತನ ಸಹಿಃ

**2** ನೇ ಆರೋಪಿತನ ಸಹಿಃ

**3** ನೇ ಆರೋಪಿತನ ಸಹಿಃ

**4** ನೇ ಆರೋಪಿತನ ಸಹಿಃ